# ಆಹಾ ಸುದ್ದಿ!

★ ಸಸಿತೋಟ

ಭಾರತದಲ್ಲಿ ಮೊದಲ ಬಾರಿಗೆ ಜೋಡಿಯೊಂದು ರೈಲಿನಲ್ಲಿ ಮದುವೆ ಶಾಸ್ತ್ರ ಮಾಡಿಕೊಂಡಿದೆ. ಉ.ಪ್ರದೇಶದ ಗೋರಖ್‌ಪುರ ಹಾಗೂ ಲಖನೌ ಮಧ್ಯೆ ಜ್ಯೋತ್ಸ್ನಾ ಹಾಗೂ ಸಚಿನ್ ಎಂಬುವವರ ಈ ವಿವಾಹ ನಡೆದಿದ್ದು, ಆರ್ಟ್ ಆಫ್ ಲಿವಿಂಗ್‌ನ ಶ್ರೀ ಶ್ರೀ ರವಿಶಂಕರ್ ಗುರೂಜಿ ವಿವಾಹ ವಿಧಿ ಬೋಧಿಸಿದರಂತೆ. ಚಲಿಸುತ್ತಿರುವ ರೈಲಿನಲ್ಲಿ ಮಗು ಹುಟ್ಟಿರುವುದನ್ನು ಈ ಮೊದಲೇ ಕೇಳಿದ್ದೇವೆ. ಮಗು ನಂತರ ಮದುವೆ ಸುದ್ದಿ.



ಮೆಕ್ಸಿಕೋದಲ್ಲಿ ಮರವನ್ನು ಮದುವೆಯಾಗುವ ಸಂಪ್ರದಾಯವಿದೆಯಂತೆ. ಮರಗಳ ಮಾರಣ ಹೋಮ ಮಾಡಿ ಈ ಯುವತಿಯರನ್ನು ವಿಧವೆಯರನ್ನಾಗಿ ಮಾಡಬೇಡಿ ಎಂಬ ಸಂದೇಶ ಈ ಸಂಪ್ರದಾಯದ ಹಿಂದೆ ಇದೆಯಂತೆ. ನಿಜವಾಗಲೂ ಈ ಯೋಗ್ಯ ಮ(ವರ)ಗಳ ಸಂಖ್ಯೆ ಕಡಿಮೆಯಿದೆ ಎಂಬುದಕ್ಕೆ ಇಬ್ಬಿಬ್ಬರು ಯುವತಿಯರು ಒಂದೇ ಮರವನ್ನು ಮದುವೆಯಾಗಿರುವುದು ಸಾಕ್ಷಿಯಲ್ಲವೇ!



ಥಾಯ್ಲೆಂಡ್‌ನಲ್ಲಿ ಹೆವಿ ವೇಟ್‌ಗಳಿಗೂ ಸೌಂದರ್ಯ ಸ್ಪರ್ಧೆ ನಡೆಸುವ ಪರಿಪಾಠವಿದೆ. ಈಕೆ 'ಮಿಸ್ ಜಂಬೊ' ವಿಜೇತ ಕಿರೀಟ ತೊಟ್ಟಿದ್ದಾಳೆ.




ವಿಯೆಟ್ನಾಮಿನಲ್ಲಿ ಇತ್ತೀಚೆಗೆ ಮಾನವ ಚೆಸ್ ಗೇಮ್ ನಡೆಯಿತು. ಹದಿಹರೆಯದವರನ್ನು ಚೆಸ್ ಕಾಯಿಗಳನ್ನಾಗಿ ಮಾಡಿಕೊಂಡು ಆಟ ಆಡಲಾಯಿತಂತೆ. ಮನುಷ್ಯರೇ ಕಾಯಿಗಳಾದರೆ ದಾಳವಾದವರು ಯಾರೋ!



ಅಮೆರಿಕದ ಮೃಗಾಲಯದಲ್ಲಿರುವ ಈ ಸಿಂಹಿಣಿಗೆ ಗಡ್ಡ ಹಾಗೂ ತಲೆ ಮೇಲೆ ಕೂದಲು ಬೆಳೆದಿದ್ದು, ಪಶು ವೈದ್ಯರನ್ನು ಚಕಿತಗೊಳಿಸಿದೆಯಂತೆ. ಹಾರ್ಮೋನ್ ತೊಂದರೆ ಇರಬಹುದು ಎಂದು ಶಂಕಿಸಲಾಗಿದ್ದು, ಸದ್ಯ ಈ ವಿಷಯದಲ್ಲಾದರೂ ಸಿಂಹಿಣಿ ಗಂಡು ಸಿಂಹಕ್ಕೆ ಸೆಡ್ಡು ಹೊಡೆಯಲು ಸಜ್ಜಾಗಿದೆ ಎಂದು ಮೃಗಾಲಯದ ಅಧಿಕಾರಿಗಳು ಜೋಕ್ ಕಟ್ ಮಾಡುತ್ತಿದ್ದಾರಂತೆ.

ದೇಹದ ದುರ್ಗಂಧದ ವಿರುದ್ಧ ಸೂಕ್ಷ್ಮತೆ ಹೊಂದಿರುವವರು, ಅಂದರೆ ಬಲಪಂಥೀಯರು ಅಮೆರಿಕದ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರನ್ನು ಬೆಂಬಲಿಸುತ್ತಾರಂತೆ. ಹೀಗೆಂದು ರಾಯಲ್ ಸೊಸೈಟಿ ಜರ್ನಲ್ ಓಪನ್ ಸೈನ್ಸ್ ನಲ್ಲಿ ಪ್ರಕಟವಾದ ಸಮೀಕ್ಷೆಯ ವರದಿ ಹೇಳಿದೆಯಂತೆ. ಈ ಸಮೀಕ್ಷೆಯನ್ನು ಅಮೆರಿಕದಲ್ಲಿ ಕಳೆದ ಚುನಾವಣೆ ಸಂದರ್ಭದಲ್ಲೇ ನಡೆಸಲಾಗಿತ್ತು. ಟ್ರಂಪ್ ವಲಸೆಗಾರರ ಬಗ್ಗೆ ತಿರಸ್ಕಾರ ಹೊಂದಿರುವುದನ್ನು ಈ ಅಧ್ಯಯನದಲ್ಲಿ ಅದು ಹೇಗೋ ಜೋಡಿಸಲಾಗಿದೆಯಂತೆ. ಉಸಿರೆಳೆದುಕೊಳ್ಳುವಾಗ ಹುಷಾರಾಗಿರಿ, ನೀವು ಎಡವೋ, ಬಲವೋ ಎಂಬುದನ್ನು ಇದು ತೋರಿಸಿಬಿಡಬಹುದು.